ಶ್ರೀ ಜಿ. ಬಿ. ಶಂಕರ್‌ರಾವ್.—ರೈತರಿಗೆ ಬಾವಿಗಳನ್ನು ತೆಗೆಸಲು ಸರ್ಕಾರ ಲ್ಯಾಂಡ್ ಡೆವಲ್‌ಪ್‌ಮೆಂಟ್ ಬ್ಯಾಂಕ್ ಮುಖಾಂತರ ಸಹಾಯ ಮಾಡುತ್ತದೆ. ಯಾರಿಗೆ ಅವಶ್ಯಕತೆ ಇದೆಯೋ ಅವರು ಲ್ಯಾಂಡ್ ಡವಲಪ್‌ಮೆಂಟ್ ಬ್ಯಾಂಕಿಗೆ ಹೋದರೆ, ಹಣ ಸಿಗುತ್ತದೆ. ಪ್ರತಿಯೊಂದು ಬಾವಿಗೆ ಮೂರು ಸಾವಿರ ಸಾಕಾಗುವುದಿಲ್ಲವೆಂದು ಲಿಮಿಟನ್ನು 5 ಸಾವಿರಕ್ಕೆ ಏರಿಸಿದ್ದೇವೆಂದು ಹೇಳಿದ್ದೇನೆ.

Defunct Co-operative Societies in Krishnarajapet

*Q.—227. Sri M. K. BOMME GOWDA (K. R. Pet).—

Will the Minister for Development and Co-operation be pleased to state:—

(*a*) the number of defunct co-operative societies in Krishnarajapet Taluk;

(*b*) the number of Co-operative Societies in which misappropriation of funds occurred?

*A.—Sri P. M. NADGOUDA (Minister for Development and Co-operation)

(*a*) 13 Societies.
(*b*) One.

ಶ್ರೀ ಎಂ. ಕೆ. ಬೊಮ್ಮೇಗೌಡ.—13 ಸೊಸೈಟಿಗಳಲ್ಲಿ ಒಂದು ಡಿಫಾಲ್ಟರ್ ಆಗಿದೆ ಎಂದು ಹೇಳುತ್ತೀರಿ. ಅದರ ಹೆಸರು ಹೇಳುತ್ತೀರಾ?

†ಶ್ರೀ ಪಿ. ಎಂ. ನಾಡಗೌಡ.—13 ಸೊಸೈಟಿಗಳು ಕೃಷ್ಣರಾಜಪೇಟೆಯಲ್ಲಿ ಕೆಲಸಮಾಡುವುದಿಲ್ಲ. 6 ಸೊಸೈಟಿಗಳು ಲಿಕ್ವಿಡೇಷನ್ ಆಗಿದೆ. 9 ಸೊಸೈಟಿಗಳು ಸುಪರ್‌ಸೀಡ್ ಆಗಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಯಾವ್ಯಾವುದು ಎಂದು ಹೇಳುತ್ತೀರಾ?

ಶ್ರೀ ಪಿ. ಎಂ. ನಾಡಗೌಡ.—ಅವುಗಳ ಹೆಸರು ಇಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ ಸೊಸೈಟಿ ಇದ್ದಾಗ್ಯೂ ಹೊಸದಾಗಿ ಅವರೇ ಬೇರೆ ಸೊಸೈಟ್ಟಿ ತೆಗೆದು ಕೆಲಸ ಮಾಡಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಪಿ. ಎಂ. ನಾಡಗೌಡ.—ಅಂಥದ್ದು ಏನೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಅಂಥದು ಯಾವುದಾದರೂ ಸೊಸೈಟಿಗಳು ರಿಜಿಸ್ಟ್ರೇಷನ್ ಮಾಡುವುದಕ್ಕೆ ಬಂದರೆ, ವಿಚಾರ ಮಾಡುತ್ತೇನೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಡಿಫಂಕ್ಟ್ ಆಗಿರತಕ್ಕ ಸೊಸೈಟಿಗಳಲ್ಲಿ, ದುಡ್ಡನ್ನು ರೋಪ ಮಾಡಿ, ಇವತ್ತು ಅದೇ ಊರಿನಲ್ಲಿ ಮತ್ತೊಂದು ಸೊಸೈಟಿಯು ಕೆಲಸ ಮಾಡತಕ್ಕದ್ದು ತಮ್ಮ ಗಮನಕ್ಕೆ ಬಂದಲ್ಲಿ ತಾವು ಅದನ್ನು ತರಿಸಿ ಯಾವಾಗ ಕೊಡುತ್ತೀರಿ?

ಶ್ರೀ ಪಿ. ಎಂ. ನಾಡಗೌಡ.—ಅದನ್ನು ವಿಚಾರಮಾಡಿ ತಿಳಿಸುತ್ತೇನೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಡಿಫಾಲ್ಟರ್ ಆಗಿರತಕ್ಕ ಯಾವುದಾದರೂ ಹೆಸರನ್ನು ಹೇಳುತ್ತೀರಾ?

ಶ್ರೀ ಪಿ. ಎಂ. ನಾಡಗೌಡ.—ಈಗ ಒಂದು ಸೋಮನಹಳ್ಳಿ ಸೊಸೈಟಿಯಲ್ಲಿ ಮಿಸ್‌ಅಪ್ರೊಪ್ರಿಯೇಷನ್ ಆಗಿರತಕ್ಕದ್ದು 26,439 ರೂಪಾಯಿಗಳು.

9-00 A.M.

ಶ್ರೀ ಕೆ. ಎಚ್. ಪಾಟೀಲ್—ಹಣದ ದುರುಪಯೋಗವಾಗಿರುವ ಸಹಕಾರ ಸಂಘಗಳಮೇಲ ಕನಿಷ್ಟಪಕ್ಷ ಎಷ್ಟು ಕಾಲದಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಪಿ. ಎಂ. ನಾಡಗೌಡ.—ಹಣದ ದುರುಪಯೋಗವಾಗಿದೆಯೆಂದು ತಿಳಿದುಬಂದಕೂಡಲೆ ಮಾನ್ಯ ಸದಸ್ಯರುಗಳು ತಿಳಿಸಿದರೆ ಶೀಘ್ರವಾಗಿ ಅಪರಾಧಿಗಳನ್ನು ಕೋರ್ಟ್‌ಮುಂದೆ ಹಾಜರ್ ಮಾಡಿ ಸಿವಿಲ್ ಕ್ರಮ ತೆಗೆದುಕೊಳ್ಳುತ್ತೇವೆ. ಇಂತಹ ವಿಚಾರಗಳಲ್ಲಿ ಸರ್ಕಾರದವರು ಕಾನೂನು ಪ್ರಕಾರ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಹಣದ ದುರುಪಯೋಗವಾಗಿರುವ ಸಹಕಾರ ಸಂಘಗಳು 7-8 ಇವೆ. ಕೆಲವು ಸಹಕಾರ ಸಂಘಗಳಲ್ಲಿ ಇನ್ನೂ ಜನರರ್ ಬಾಡಿ ಮೀಟಿಂಗ್ ಕೂಡ ಆಗದಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಪಿ. ಎಂ. ನಾಡಗೌಡ—ಈ ಹಣದ ದುರುಪಯೋಗವಾಗಿರುವ ಸೊಸೈಟಿ ವಿಚಾರವನ್ನು ಮಾನ್ಯ ಸದಸ್ಯರಿಗೆ ಹೇಳುವುದು ಅವಶ್ಯಕವೆಂದು ಕಾಣುತ್ತದೆ. ಸರ್ಕಾರದವರು ಈ ಸೊಸೈಟಿಯ ಕಾಗದಗಳನ್ನು ತೆಗೆದುಕೊಳ್ಳಲು ಡೆಪ್ಯೂಟಿ ರಿಜಿಸ್ಟ್ರಾರ್ ಅವರು ಪ್ರಯತ್ನಪಟ್ಟಾಗ ಆಗಲಿಲ್ಲ. ಕೊನೆಗೆ ಪೋಲೀಸರನ್ನು ಕಳಿಸಿ ಕಾಗದಗಳನ್ನು ವಶಪಡಿಸಿಕೊಳ್ಳಲಾಯಿತು. ಎಷ್ಟು ಹಣ ಲ್ಯಾಪ್ಸ್ ಆಗಿದೆ ಎಂಬುದನ್ನು ತಿಳಿದು ನಂತರ ಕ್ರಿಮಿನಲ್ ಕೇಸ್ ಹಾಕಲಾಯಿತು. ಆ ಬಗ್ಗೆ ಇಬ್ಬರು ಅಪರಾಧಿಗಳು ಇದ್ದಾರೆ, ಮುಂದಿನ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎ. ಕೆ. ಬೊಮ್ಮೇಗೌಡ.—ಹಣದ ದುರುಪಯೋಗ ಮಾಡಿದವರ ಮೇಲೆ ಕೇಸ್ ಆಗಿದ್ದರೂ ಸಹ ಮತ್ತೆ ಅವರನ್ನು ಕೆಲಸಕ್ಕೆ ತೆಗೆದುಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಪಿ. ಎಂ. ನಾಡಗೌಡ.—ಆ ವಿಚಾರ ಗೊತ್ತಿಲ್ಲ. ಯಾರು ಹಣದ ದುರುಪಯೋಗ ಮಾಡಿದ್ದಾರೋ, ಅಂಥವರ ಮನೆ, ಹೊಲವನ್ನು ಸರ್ಕಾರದವರು ಸ್ವಾಧೀನಪಡಿಸಿಕೊಂಡಿದ್ದಾರೆ. ಅವರ ಮೇಲೆ ದಯಾದಾಕ್ಷಿಣ್ಯವಿಲ್ಲದೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—13 ಸಂಘಗಳು ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದೀರಿ. ಈ 13 ಸೊಸೈಟಿಗಳಿಗೆ ಅಡ್ಮಿನಿಸ್ಟ್ರೇಟರ್‌ಗಳನ್ನು ನೇಮಕ ಮಾಡಿದ್ದೀರಾ. ಈ ಸೊಸೈಟಿಗಳಿಂದ ಸರ್ಕಾರಕ್ಕೆ ಎಷ್ಟು ಬಾಕಿ ವಸೂಲಾಗಬೇಕಾಗಿದೆ ಮತ್ತು ಎಲ್ಲಾ ಸೊಸೈಟಿಗಳದ್ದು ಆಡಿಟ್ ಆಗಿದೆಯೆ ?

ಶ್ರೀ ಪಿ. ಎಂ. ನಾಡಗೌಡ.—ಕೆಲವು ಸೊಸೈಟಿಗಳಿಗೆ ಅಡ್ಮಿನಿಸ್ಟ್ರೇಟರ್‌ಗಳನ್ನು ನೇಮಿಸಿದ್ದೇವೆ. ಈ ಸೊಸೈಟಿಯಲ್ಲಿ ಒಟ್ಟು ರೂಪಾಯಿ 26,439-24 ಹಣದ ದುರುಪಯೋಗವಾಗಿದೆ. ಹಣದ ದುರುಪಯೋಗ ಮಾಡಿದವರ ಮನೆ ಮತ್ತು ಹೊಲವನ್ನು ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಂಡಿದ್ದೇವೆ. ಕ್ರಿಮಿನಲ್ ಆಕ್ಷನ್ ತೆಗೆದುಕೊಂಡಿದ್ದೇವೆ. ಸಿವಿಲ್ ಆಕ್ಷನ್ ತೆಗೆದುಕೊಂಡಿದ್ದೇವೆ. ಈ ಕೇಸ್ ಕೋಆಪರೇಟೀವ್ ಟ್ರಿಬ್ಯುನಲ್ ಮುಂದೆ ಇದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ 13 ಸೊಸೈಟಿಗಳಲ್ಲೂ ಆಡಿಟ್ ಮಾಡಿಸಿದ್ದೀರಾ ? ಮತ್ತು ಯಾವುದಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ತಾವು ಕೇಳಿರುವ ಪ್ರಶ್ನೆಯಲ್ಲಿ ಒಂದು ಸಹಕಾರ ಸಂಘದ್ದು ಮಾತ್ರ ಬರುತ್ತದೆ. ಬೇರೆ ಸೊಸೈಟಿಗಳ ವಿವರ ಬೇಕಾದರೆ ತರಿಸಿಕೊಡುತ್ತೇನೆ.

Major Industry at Kolar Town.

*Q.—262. Sri T. CHANNAIAH (Mulbagal).—

Will the Chief Minister be pleased to state :—

(*a*) whether there was any proposal to decentralise industries in Mysore State ;

(*b*) the action taken by Government to locate any big industry at Kolar Town, District Headquarters ?

A.— Sri S. NIJALINGAPPA (Chief Minister).—

(*a*) Yes.